**ಅಸಲು ದಾವೆ ಸಂಖ್ಯೆ -216/2021**
**ಪಿ.ಡಬ್ಲ್ಯೂ- 1**

**ದಿನಾಂಕ 05-02-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ.ಎಚ್.ವಾಯ್.ಪಿ ವಕೀಲರಿಂದ ಪ್ರತಿವಾದಿ-1 ಮತ್ತು 2 ಪರವಾಗಿ**

1. ನಾನು 8 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ಈ ದಾವೆಯನ್ನು ನನ್ನ ಸಹೋದರ ಮಾರುತಿ ಕುರುಬೆಟ್ಟ ಅವರ ವಿರುದ್ದ ಪಾಲು ಕೇಳಿ ಸಲ್ಲಿಸಿದ್ದೇನೆ. ದಾವಾ ಆಸ್ತಿ ಒಟ್ಟು 4 ಏಕರೆ 18 ಗುಂಟೆ ಇರುತ್ತದೆ. ದಾವಾ ಆಸ್ತಿಯ ನಂ.64/25. ದಾವಾ ಆಸ್ತಿ ನಿಮ್ಮ ತವರು ಮನೆಗೆ ಹೇಗೆ ಬಂದಿತು ಎಂದು ಹೇಳಬಹುದು ಎಂದರೆ ಸಾಕ್ಷಿಯು ನನ್ನ ತಾಯಿ ಆಸ್ತಿ ಎಂದು ಹೇಳುತ್ತಾರೆ. ನಿಮ್ಮ ತಾಯಿಗೆ ಸದರಿ ಆಸ್ತಿ ನಿಮ್ಮ ಪ್ರಕಾರ ಹೇಗೆ ಬಂದಿತು ಎಂದರೆ ಸಾಕ್ಷಿಯು ನನ್ನ ತಾಯಿಯ ತಂದೆಗೆ ನನ್ನ ತಾಯಿಯನ್ನು ಹೊರತುಪಡಿಸಿ ಬೇರೆ ಸಂತಾನ ಇಲ್ಲದ ಕಾರಣ ನನ್ನ ತಾಯಿಗೆ ಸದರಿ ಆಸ್ತಿ ಬಂದಿತು ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಾಖಲಾತಿಯ ಆಧಾರದ ಮೇಲೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಯಾವುದೇ ದಾಖಲಾತಿ ಇಲ್ಲ, ಹಾಗೇ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ನಮೂದಿಸಿದ ಎಲ್ಲಾ ವಿಷಯ ಸರಿ ಇದೆಯಾ ಎಂದರೆ ಇದೆ ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಆಸ್ತಿ ನಿಮ್ಮ ತಾಯಿಗೆ ಮೃತ್ಯುಪತ್ರದ ಪ್ರಕಾರ ಬಂದಿದೆ ಎಂದರೆ ಸರಿ.

ಸದರಿ ಮೃತ್ಯುಪತ್ರವನ್ನು ಈ ಪ್ರಕರಣದಲ್ಲಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಮೃತ್ಯುಪತ್ರ ಹಾಜರಪಡಿಸಲು ಏನಾದರೂ ತೊಂದರೆ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

2. ನಿಮ್ಮ ತಾಯಿ ಮಾಯವ್ವ ಅವರು ತೀರಿಕೊಂಡು ಎಷ್ಟು ವರ್ಷಗಳು ಆಗಿವೆ ಎಂದರೆ ಸುಮಾರು 8 ವರ್ಷಗಳು ಆಗಿವೆ ಎಂದು ಹೇಳುತ್ತಾರೆ. ದಿಃ29.11.2001 ರಲ್ಲಿ ನಿಮ್ಮ ತಾಯಿ 30 ಗುಂಟೆ ಆಸ್ತಿಯನ್ನು ಬಸಪ್ಪ ಲಕ್ಷ್ಮಪ್ಪ ಕೋಟಿ ಅವರಿಗೆ ಮಾರಾಟ ಮಾಡಿದರು ಎಂದರೆ ಸರಿ. ಸದರಿ ಕೋಟಿ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಮದವೆ 2006 ರಲ್ಲಿ ಆಗಿದೆ. ಮದುವೆಯ ಸಮಯದಲ್ಲಿ ಸಾಕಷ್ಟು ಬಂಗಾರ, ಹಣ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನೀವು ಈಗ ಸುಖದಿಂದ ನಿಮ್ಮ ಗಂಡನ ಮನೆಯಲ್ಲಿ ವಾಸಿಸುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮತ್ತು ನಿಮ್ಮ ಸಹೋದರ ಸೇರಿ ಖಾಸಗಿ ಸಾಲ, ಬ್ಯಾಂಕ ಸಾಲ ದವಾಖಾನೆ ಖರ್ಚು ಸೇರಿ ಮತ್ತು ನಿಮಗೆ ಹಾಗೂ 1 ನೇ ಪ್ರತಿವಾದಿಯವರಿಗೆ ತಲಾ 4 ಲಕ್ಷ ರೂಪಾಯಿಯಂತೆ ಹಣ ನೀಡಿ 70 ಲಕ್ಷ ವೆಚ್ಚ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ 70 ಲಕ್ಷ ರೂಪಾಯಿ ಸಾಲ ಮರುಪಾವತಿ ಮಾಡುವ ಜವಾಬ್ದಾರಿ 2 ನೇ ಪ್ರತಿವಾದಿಯವರ ಮೇಲೆ ಇತ್ತು ಎಂದರೆ ಸರಿಯಲ್ಲ. ಆ ರೀತಿ ನಿಮಗೆ 4 ಲಕ್ಷ ರೂಪಾಯಿ ನೀಡಿದ್ದರಿಂದ ಮತ್ತು ಸಾಲದ ಜವಾಬ್ದಾರಿ 2 ನೇ ಪ್ರತಿವಾದಿ ಮೇಲೆ ಇದಿದ್ದರಿಂದ ನಿಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನೀವು 4 ಲಕ್ಷ ರೂಪಾಯಿ ಸ್ವೀಕರಿಸಿ ದಾವಾ ಆಸ್ತಿಯ ಮೇಲಿನ ಹಕ್ಕನ್ನು ಲಿಖಿತ ರೂಪದಲ್ಲಿ ಬಿಟ್ಟುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಪಾಲಿಗೆ ದಾವಾ ಆಸ್ತಿಗಳ ಬದಲಾಗಿ 4 ಲಕ್ಷ ರೂಪಾಯಿ ಸ್ವೀಕರಿಸಿ ನಿಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ